'ಸುಧಾ' ಜೊತೆಗಿನ ಓದುಗರ ಒಡನಾಟ

## ನನ್ನ ಪ್ರೇರಕಶಕ್ತಿ

ಆಗ ನಮ್ಮ ಓಣಿಯಲ್ಲಿ ಕೇವಲ ಎರಡು ಮನೆಗಳಿಗೆ 'ಸುಧಾ' ಪತ್ರಿಕೆ ಬರುತ್ತಿತ್ತು. ನಾನು ಅವರ ಮನೆಯಿಂದ ತಂದು ಓದುತ್ತಿದ್ದೆ. ಆದರೆ ಒಮ್ಮೊಮ್ಮೆ ನನಗೆ ಓದಲು ಸಿಗುತ್ತಿರಲಿಲ್ಲ. ಹೀಗಾಗಿ ಒಂದು ಉಪಾಯ ಮಾಡಿದೆ. ನಮ್ಮ ಊರಿನಲ್ಲಿ, ಹಳೆಯ ಪುಸ್ತಕಗಳನ್ನು ಮಾರಾಟ ಮಾಡುವ ಅಂಗಡಿಯಲ್ಲಿ ತಿಂಗಳಿಗೊಮ್ಮೆ ತಿಂಗಳಿನ ಎಲ್ಲಾ 'ಸುಧಾ' ಸಂಚಿಕೆಗಳನ್ನು ಒಟ್ಟುಗೂಡಿಸಿ ಮಾರುತ್ತಿದ್ದರು. ನಾನು ಅವುಗಳನ್ನು ಕೊಂಡು ಒಮ್ಮೆಲೇ ಓದುತ್ತಿದ್ದೆ.

ನಾನು ನೌಕರಿ ಸೇರಿದ ಮೇಲೆ 'ಸುಧಾ' ನಮ್ಮ ಮನೆಗೆ ಕಾಲಿಟ್ಟಿತು.

ಈಗ ಪತ್ರಿಕೆ ಆಧುನಿಕ ತಂತ್ರಜ್ಞಾನಕ್ಕೆ ತನ್ನನ್ನು ತಾನು ಒಳಪಡಿಸಿಕೊಂಡು ಅನೇಕ ಹೊಸತನಗಳನ್ನು ಮೈಗೂಡಿಸಿಕೊಂಡಿದೆ. ಹೊಸ ವಿದ್ಯಮಾನಗಳ ಕುರಿತು ಲೇಖನಗಳು ಪ್ರಕಟವಾಗುತ್ತಿವೆ. ತನ್ನ ಆಶಯಗಳನ್ನು, ಗಟ್ಟಿತನವನ್ನು ಉಳಿಸಿಕೊಂಡು ಓದುಗರನ್ನು ಸೆಳೆಯುವಲ್ಲಿ ಯಶಸ್ವಿಯಾಗಿದೆ. ಪ್ರಸ್ತುತ ವಿದ್ಯಮಾನಗಳ ಕುರಿತು ಸಂಪಾದಕೀಯ, ತತ್ವಜ್ಞಾನ, ವಚನ ಸಾಹಿತ್ಯದ ಚಿಂತನೆಗಳ ಕುರಿತು ಅನೇಕ ಲೇಖನಗಳು ತುಂಬಾ ಮೌಲಿಕವಾಗಿರುತ್ತವೆ. ಎಲ್ಲಾ ವಯಸ್ಸಿನ ಓದುಗರನ್ನು ತೃಪ್ತಿಪಡಿಸುವ 'ಸುಧಾ', ಕೌಟುಂಬಿಕ ಪತ್ರಿಕೆ. ಪ್ರತಿವಾರವೂ ಚಿತ್ತಾಕರ್ಷಕ ಮುಖಪುಟ ಹೊತ್ತು ಬರುತ್ತಿದೆ. ಮಕ್ಕಳ ವಿಭಾಗದಲ್ಲಿ ಪ್ರಕಟಗೊಂಡ ನನ್ನ ಅನೇಕ ಕಥೆಗಳು, ಕವಿತೆಗಳು ನನಗೆ ಪ್ರೇರಕವಾಗಿವೆ. ಈ 'ಪ್ರೇರಕಶಕ್ತಿ'ಗೆ ಧನ್ಯವಾದ.

—ಕೆ.ಪಿ. ರಾಮಗುಂಡಿ, ಬೈಲಹೊಂಗಲ

## ಒಡನಾಡಿಯೇ...

ಕಿಶೋರಾವಸ್ಥೆ, ಯೌವನ,
ಗೃಹಸ್ಥದಿಂದ ಅರವತ್ತರ
ಅರಳುಮರುಳಿನ ಈ
ವರ್ತಮಾನಕ್ಕೂ ವಾರಕ್ಕೊಮ್ಮೆ
'ಸುಧಾ'ಳ ಸಾಂಗತ್ಯ ತಪ್ಪುವ ಪ್ರಮೇಯವೇ ಬಂದಿಲ್ಲ. ಕಾಮಿಕ್ಸ್ (ಡಾಬೂ, ಮಜನೂ, ಆಜಾದ್) ಗಳಿಂದ ಹಿಡಿದು ಸದಭಿರುಚಿಯ ಕಥೆ, ಧಾರಾವಾಹಿ, ಹಾಸ್ಯ ಬರಹಗಳ ಪರಿಚಯವನ್ನು ನನಗೆ ಮಾಡಿಸಿದ್ದೇ 'ಸುಧಾ'. ವಿಶೇಷಾಂಕಗಳಂತೂ ಅದ್ವಿತೀಯ. ಬರೆಯುವ ನನ್ನ ಹವ್ಯಾಸಕ್ಕೆ ನೀರೆರೆದು ಬೆಳೆಸಿದವಳು 'ಸುಧಾ'. 'ಸುಧಾ'ದಲ್ಲಿ ಕಥೆ, ಲೇಖನ ಪ್ರಕಟವಾದರೆ ಆ ಲೇಖಕನ ಸ್ಟೇಟಸ್ ಬಾನೆತ್ತರಕ್ಕೇರುವುದು ಇಂದಿಗೂ ದಿಟ. 'ಸುಧಾ'... ಇರಲಿ ಕನ್ನಡಿಗರ ಜೊತೆ ಸದಾ...

—ಆರ್.ಟಿ. ಶರಣ್, ಕಲಬುರಗಿ

## ಚಿರಕಾಲ ಬೆಳಗುತಿರು

ನಾನು 40 ವರ್ಷಗಳಿಂದಲೂ ನಿನ್ನ ಕಾಯಂ ಓದುಗ. ನನಗೀಗ 61 ತುಂಬಿದೆ, ನಿನಗೆ 60. ನಮ್ಮ ಅವಿಭಕ್ತ ಕುಟುಂಬದಲ್ಲಿ ನಿನ್ನ ಪ್ರವೇಶವಾದದ್ದು 1965ರಲ್ಲಿ ಎಂದು ಅಕ್ಕ ಹೇಳಿದ ನೆನಪು. ಆಗ ನೀನು ಬುಧವಾರ ಬರುತ್ತಿದ್ದೆಯಂತೆ. ರಾಜ್ ಸಿನಿಮಾ ಬಿಡುಗಡೆಯ ದಿನ ಹೇಗೆ ಸಂಭ್ರಮ ಪಡುತ್ತಿದ್ದೆವೋ ಹಾಗೆಯೇ ನಿನ್ನ ಕಂಡೊಡನೆ ಸಂಭ್ರಮ ತುಂಬುತ್ತದೆ. ಈಗ ಪ್ರತಿ ಗುರುವಾರ ನಿನ್ನ ಆಗಮನದ ನಿರೀಕ್ಷೆಯಲ್ಲಿ ಚಾತಕಪಕ್ಷಿಯಾಗಿ ಕಾಯುತ್ತಿರುತ್ತೇನೆ. ಪ್ರಚಲಿತ ರಾಜಕೀಯ ವಿಶ್ಲೇಷಣೆಗಳ ಹೊರತಾಗಿ ಮಿಕ್ಕೆಲ್ಲ ಪುಟಗಳೂ ನನಗೆ ಅತ್ಯಂತ ಪ್ರಿಯ. 'ಸುಧಾ' ನೀನು ಚಿರಕಾಲ ಕನ್ನಡನಾಡನ್ನು ಬೆಳಗುತಿರು...

—ಕೇಶವ ಐತಾಳ ಕೆ.,
ಶಿವಮೊಗ್ಗ

## ಸದಾ ನೆಲೆಸಿರುವ 'ಸುಧಾ'




ನಾನು ಚಿಕ್ಕವನಾಗಿದ್ದಾಗ ನೋಡಿದ ಮೊದಲ ವಾರಪತ್ರಿಕೆಯೇ 'ಸುಧಾ'. ಮಕ್ಕಳಿಗೆ ನೀತಿ ಹೇಳುತ್ತಿದ್ದ ಕಥೆಗಳು ಬಹಳ ಇಷ್ಟವಾಗುತ್ತಿದ್ದವು ಆಗ. 'ಹೇಳಿಕೇಳಿ' (ಈಗ 'ನೀವು ಕೇಳಿದಿರಿ') ವಿಭಾಗವೂ ನನಗೆ ಅಚ್ಚುಮೆಚ್ಚಾಗಿತ್ತು. 50 ವರ್ಷಗಳ ನಂತರವೂ 'ಸುಧಾ' ಕಂಡ ತಕ್ಷಣ ನನಗೇ ಗೊತ್ತಿಲ್ಲದೆ ಹೃದಯ ಉಲ್ಲಾಸದಿಂದ ತುಂಬಿಕೊಳ್ಳುತ್ತದೆ. ನನ್ನ ಜೀವನದಲ್ಲಿ 'ಸುಧಾ' ಸದಾ ನೆಲೆಸಿರುತ್ತದೆ.

—ಜೆರಿಸಾ ಡಿಸೋಜಾ, ಬೆಂಗಳೂರು

## 'ಸುಧಾ'ದಲ್ಲಿ ನಮ್ಮ ಶಾಲೆ

ಧರ್ಮಸ್ಥಳ ಸಮೀಪದ ನಿಡ್ಲೆಯಲ್ಲಿ ಸರ್ಕಾರಿ ಶಾಲೆಯಲ್ಲಿ ಆಗ ಹತ್ತನೇ ತರಗತಿ ಓದುತ್ತಿದ್ದೆ. ನಮಗೆ ಹೆಡ್ ಮಾಸ್ಟರ್, ಪಿ.ಟಿ. ಸೇರಿ ಬರೀ ನಾಲ್ಕು ಜನ ಬೋಧನಾ ಸಿಬ್ಬಂದಿ ಇದ್ದರು. ನಮ್ಮ ಹೆಡ್‌ಮಾಸ್ಟರ್ ಆಗಿದ್ದ ನರಸಿಂಗ ರಾವ್ ಅವರ ಸೇವೆ, ನಿಷ್ಠೆಯ ಕಾರಣವಾಗಿ ಸತತ ಮೂರು ವರ್ಷಗಳ ಕಾಲ ಎಸ್‌ಎಸ್‌ಎಲ್‌ಸಿಯಲ್ಲಿ ನಮ್ಮ ಶಾಲೆಯಲ್ಲಿ ಶೇ. 100 ಫಲಿತಾಂಶ ಬಂದಿತ್ತು. ಆಗ ನಮ್ಮ ಶಾಲೆಯ ಯಶಸ್ಸಿನ ಕುರಿತು 1987ರಲ್ಲಿ 'ಸುಧಾ'ದಲ್ಲಿ ಸುಂದರ ಲೇಖನ ಪ್ರಕಟವಾಗಿತ್ತು. ನನ್ನ ಫೋಟೊ ಕೂಡ ಲೇಖನದೊಂದಿಗೆ ಪ್ರಕಟವಾಗಿತ್ತು. ಎಂದಿಗೂ ಈ ಸಂಗತಿ ಮರೆಯಲಾರದ್ದು.

—ರಾಜು ಪಿ.ಎಂ. ಹಾಸನ

## ಅಭಿಮಾನ, ಬಹುಮಾನ...

ಸಂಜೆ ನಾನು ಹೋಂವರ್ಕ್ ಮಾಡಿಕೊಳ್ಳುವಾಗ ಅಪ್ಪ 'ಸುಧಾ' ಓದುತ್ತಿದ್ದರು. ನನ್ನ ಹೋಂವರ್ಕ್ ಮುಗಿದ ಮೇಲೆ ಮಕ್ಕಳ ಕಥೆ, ಕವನ ಹಾಗೂ ಲೇಖನಗಳನ್ನು ನನಗಾಗಿ ಓದುತ್ತಿದ್ದರು. ಪ್ರೌಢಶಾಲೆಗೆ ಬಂದ ಮೇಲೆ ನಾನೇ ಓದಲು ಶುರು ಮಾಡಿದೆ. ಮಕ್ಕಳ ಕಥೆ, ಲೇಖನ ಓದುವುದು, ಪದಬಂಧ ಬಿಡಿಸುವುದು ಮಾಡುತ್ತಿದ್ದೆ.

ಹೀಗೆ 'ಸುಧಾ' ಓದುತ್ತಲೇ ನನ್ನ ಜ್ಞಾನವನ್ನೂ ಹೆಚ್ಚಿಸಿಕೊಂಡೆ. ಶಾಲಾ ದಿನಗಳಲ್ಲಿ ರಸಪ್ರಶ್ನೆ (ಕ್ವಿಜ್) ಸ್ಪರ್ಧೆಗಳಲ್ಲಿ ಭಾಗವಹಿಸಿ ಬಹುಮಾನ ಪಡೆದಿರುವುದಕ್ಕೆ 'ಸುಧಾ' ಕೂಡ ಪ್ರೇರಣೆ. ಹತ್ತು ವರ್ಷದ ಹಿಂದೆ 'ಸುಧಾ'ಕ್ಕೆ 50 ತುಂಬಿದಾಗ, ವಾಚಕರಿಗೆ ಕ್ವಿಜ್ ಏರ್ಪಡಿಸಿ ನಗದು ಬಹುಮಾನ ಇಡಲಾಗಿತ್ತು. 'ಸುಧಾ'ದಲ್ಲಿ ಬಂದ ಲೇಖನಗಳ ಮೇಲೆ ಪ್ರಶ್ನೆ ಕೇಳಲಾಗಿತ್ತು. ಉತ್ತರ ಬರೆದು ಅಂಚೆ ಮೂಲಕ ಕಳುಹಿಸಬೇಕಿತ್ತು. ನಾನಾಗ ಕಾಲೇಜಿನಲ್ಲಿ ಓದುತ್ತಿದ್ದೆ. 'ಸುಧಾ' ಬಂದ ದಿನವೇ ಉತ್ತರ ಬರೆದು ಅಂಚೆ ಕವರ್‌ಗೆ ಹಾಕಿ ಕಳುಹಿಸುತ್ತಿದ್ದೆ. ನನ್ನ ಭಗೀರಥ ಪ್ರಯತ್ನ ಸಾಗಿತ್ತು!. ಅಮ್ಮ ತಮಾಷೆ ಮಾಡುತ್ತಿದ್ದರು, 'ನಮ್ಮ ಸಾಗರ, ಶಿವಮೊಗ್ಗಕ್ಕೆ ಬಹುಮಾನ ಬಂದಿದೆ; ಮುಂದೆ ನಮ್ಮೂರಿಗೆ ಗ್ಯಾರಂಟಿ ಬರುತ್ತದೆ' ಎಂದು. ಅದು ಸತ್ಯವೇ ಆಗಿಹೋಯಿತು. ಮುಂದಿನ ವಾರವೇ ಲಕ್ಕೀ ಡ್ರಾನಲ್ಲಿ ನನ್ನ ಹೆಸರು ನೋಡಿ ಸಂತೋಷಕ್ಕೆ ಪಾರವೇ ಇಲ್ಲದಾಯಿತು. ಅದೂ ₹2500 ಬಹುಮಾನ!. ನಾನೇ ನಂಬದಾದೆ! ಮತ್ತೆ ಕೆಲ ವಾರದ ತರುವಾಯ ಫಲಿತಾಂಶದಲ್ಲಿ ನನ್ನ ಹೆಸರು ಎರಡನೇ ಬಾರಿ ಬಂತು!. ಎರಡು ಬಾರಿ ಗೆಲುವು ನನ್ನದಾಗಿತ್ತು.

—ನಿಖಿತಾ ಶಶಾಂಕ್ ಭಟ್, ಬೆಂಗಳೂರು